**ಭಾರತೀಯ ಜನತಾ ಪಾರ್ಟಿ**

**11, ಅಶೋಕ ರಸ್ತೆ, ನವದೆಹಲಿ–110 001**

6ನೇ ಮಾರ್ಚ್ 2013

# ರಾಷ್ಟ್ರಪತಿಗಳು ಜಂಟಿ ಅಧಿವೇಶನ ಉದ್ದೇಶಿಸಿ ಮಾಡಿದ ಭಾಷಣದ ವಂದನಾ ನಿರ್ಣಯದಲ್ಲಿ ಶ್ರೀ ಅರುಣ್ ಜೇಟ್ಲೆಯವರು ಮಾಡಿದ ಭಾಷಣದ ಸಾರಾಂಶ

ಯುಪಿಎ ಸರ್ಕಾರ ಅಧಿಕಾರದಲ್ಲಿದ್ದು ಒಂಬತ್ತು ವರ್ಷಗಳು ಸಂದಿವೆ. ಸರ್ಕಾರ ತನ್ನ ಆಡಳಿತದ ಛಾಪು ನೀಡಲು ಒಂಬತ್ತು ವರ್ಷಗಳು ಸಮರ್ಪಕವಾದ ಅವಧಿಯೆಂದು ಹೇಳಬಹುದು. ದೇಶದ ಅದೃಷ್ಟ ಸುಧಾರಿಸಲು ಅಗತ್ಯ ಸುಧಾರಣೆಗಳನ್ನು ಮಾಡಲು ಕಾಲಾವಕಾಶವಿತ್ತು. ಯುಪಿಎ ಸರ್ಕಾರ ಕಳಪೆ ಆಡಳಿತ ದಾಖಲೆ ಹೊಂದಿದೆ. ಅತಿ ಉತ್ಸಾಹದ ಆಡಳಿತ ವ್ಯವಸ್ಥೆಯನ್ನು ಬಳುವಳಿಯಾಗಿ ಯುಪಿಎ ಸರ್ಕಾರ ಪಡೆದಿತ್ತು. ವಿಶ್ವದ ಅತ್ಯಾಕರ್ಷಕ ಬಂಡವಾಳ ಹೂಡಿಕೆ ತಾಣವೆಂಬ ಖ್ಯಾತಿ ಪಡೆದಿತ್ತು. ಶೇಕಡ ೮.೪ರ ಜಿಡಿಪಿ ವೃದ್ಧಿದರವನ್ನು ಎನ್‌ಡಿಎ ಸರ್ಕಾರ ನೀಡಿತ್ತು, ಜೊತೆಗೆ ಅರ್ಥವ್ಯವಸ್ಥೆಯ ಮೂಲ ಲಕ್ಷಣಗಳು ಅರೋಗ್ಯಕರವಾಗಿದ್ದವು. ಯುಪಿಎ ತನ್ನ ಆಳ್ವಿಕೆಯ ಕಡೆ ವರ್ಷ ಪ್ರವೇಶಿಸುವ ಹೊತ್ತಿಗೆ, ಒಂದು ದಶಕಗಳ ಹಿಂದೆ ಇದ್ದ ಭಾರತದ ವರ್ಚಸ್ಸು ಮಾಯವಾಗಿದೆ. ಬ್ರಿಕ್ಸ್ ರಾಷ್ಟ್ರಗಳ ಒಕ್ಕೂಟದಲ್ಲಿ ಭಾರತವನ್ನು ಪ್ರತಿನಿಧಿಸುವ ಆಂಗ್ಲದ 'ಐ' ಅಕ್ಷರವನ್ನು ಹೊರದೂಡುವ ಪರಿಸ್ಥಿತಿ ಎದುರಾಗಿದೆ. ಸಿನಿಕತನ, ಆಡಳಿತದ ಕುರಿತು ಅವಿಶ್ವಾಸ, ನೀತಿ ವೈಕಲ್ಯ ಹಾಗೂ ಬದಲಾವಣೆಯ ಕೂಗು ಎಲ್ಲೆಡೆ ಇದೆ.
ಲವಲವಿಕೆಯಿಂದ ಕೂಡಿದ ದೇಶವನ್ನು ಸಿನಿಕತನದ ದೇಶವಾಗಿ ಯುಪಿಎ ಹೇಗೆ ಬದಲಾಯಿಸಿತು?

## ಯುಪಿಎ ಆಳ್ವಿಕೆ ಮಾದರಿ

ವಿಶ್ವದ ವಿಶಾಲ ಪ್ರಜಾಪ್ರಭುತ್ವಕ್ಕೆ ಯುಪಿಎ ಶೈಲಿಯ ಆಳ್ವಿಕೆ ಹೊಂದುವುದಿಲ್ಲವೆಂದು ನಾನು ಹಲವುಬಾರಿ ತಿಳಿಸಿದ್ದೇನೆ. ಪಕ್ಷದ ಸ್ವಾಭಾವಿಕನಾದ ನಾಯಕ ಪ್ರಧಾನ ಮಂತ್ರಿಯಾಗಿರಬೇಕು. ಒಂದು ಮಂಡಳಿ ಅಥವಾ ಓರ್ವ ಕಾರ್ಯನಿರ್ವಾಹಕ ಅಧಿಕಾರಿ ಆಡಳಿತ ನೋಡಿಕೊಳ್ಳುವ ಆಳ್ವಿಕೆ ಶೈಲಿ, ಕೇವಲ ವ್ಯಾಪಾರ ವಾಣಿಜ್ಯ ಮಾಡುವ ಕಂಪನಿಗಳಿಗೆ ಸರಿಹೊಂದಬಹುದು. ಆದರೆ ದೇಶ ಆಳಲು ಈ ಶೈಲಿ ಸೂಕ್ತವಲ್ಲ. ಪ್ರಧಾನ ಮಂತ್ರಿಯು ರಾಜಕೀಯ ಅಧಿಕಾರ ಹೊಂದದೆ ಇದ್ದ ಕಾರಣ ಕೆಳಕಂಡ ಸಮಸ್ಯೆಗಳು ಉದ್ಭವಿಸಿವೆ:–

- ನಾಯಕತ್ವದ ಬಿಕ್ಕಟ್ಟು
- ನೀತಿ ವ್ಯಕಲ್ಯ
- ತಪ್ಪು ಮಾಡಿದ ಸಚಿವರು ಹಾಗೂ ಬ್ರಷ್ಟಾಚಾರದ ಮೇಲೆ ನಿಯಂತ್ರಣದ ಕೊರತೆ

ಆಳ್ವಿಕೆಯಲ್ಲಿ ನಾಯಕತ್ವದ ಕೊರತೆ ಎದ್ದುಕಾಣುತ್ತಿದೆ. ಕಳೆದ ಒಂಬತ್ತು ವರ್ಷಗಳಲ್ಲಿ ಸರ್ಕಾರದ ಎಲ್ಲಾ ನಿರ್ಣಯಗಳನ್ನು ಸಂವಿಧಾನದ ಮಾನ್ಯತೆಯಿಲ್ಲದ ರಾಷ್ಟ್ರೀಯ ಸಲಹಾ ಪರಿಷತ್ತು ತೆಗೆದುಕೊಳ್ಳುತ್ತಿದೆ. ಬ್ಯಾಂಕ್ ಸಾಲ ಮನ್ನಾ ಹಾಗೂ ಮಹಾತ್ಮಗಾಂಧಿ ನರೇಗ ಯೋಜನೆಯ ಅನುಷ್ಠಾನ, ಹೀಗೆ ಹಲವಾರು ಅಸಮಂಜಸ ನೀತಿಗಳಿಂದ ಪ್ರಸ್ತುತ ಆರ್ಥಿಕ ಹಿಂಜರಿತ ಉಂಟಾಗಿದೆ. ಬ್ಯಾಂಕ್ ಸಾಲ ಮನ್ನಾ ಯೋಜನೆಯ ಲಾಭ ಕೇವಲ ಅನರ್ಹರಿಗೆ ಲಭಿಸಿದೆ ಮತ್ತು ಮಹಾತ್ಮಗಾಂಧಿ ನರೇಗಾ ಯೋಜನೆಯು ರಾಷ್ಟ್ರದ ಬಹುಪಾಲು ಸಂಪನ್ಮೂಲವನ್ನು ಬಳಸಿದರೂ, ಇದರಿಂದ ಯಾವುದೇ ಸ್ವತ್ತು ಸೃಷ್ಟಿಸಲು ಸಾಧ್ಯವಾಗಿಲ್ಲ.

## ಅರ್ಥವ್ಯವಸ್ಥೆಯ ಪರಿಸ್ಥಿತಿ

ಭಾರತ ವೃದ್ಧಿಯನ್ನು ಬಯಸುತ್ತದೆ ಎಂಬ ಮಾತಿನಲ್ಲಿ ಯಾವುದೇ ವಿರೋಧವಿಲ್ಲ. ಕೆಳ ಸ್ತರದ ವೃದ್ಧಿಯನ್ನು ಭಾರತ ಸಹಿಸದು ಹಾಗೂ ಸ್ವಾತಂತ್ರ್ಯಾ ನಂತರದ ಮೊದಲ ನಾಲ್ಕು ದಶಕಗಳು ಬಡತನ ನಿರ್ಮೂಲನೆ ಇತ್ಯಾದಿ ಜನಪ್ರಿಯ ಘೋಷಣೆಗಳೂ ಕೆಲಸಕ್ಕೆ ಬಾರದು. ಭಾರತ ಹೆಚ್ಚಿನ ವೃದ್ಧಿದರ ಬಯಸುತ್ತದೆ, ಜೊತೆಗೆ ಉತ್ತಮ ಆರ್ಥಿಕ ಚಟುವಟಿಕೆಗಳು, ಉದ್ಯೋಗ ಸೃಷ್ಟಿ, ಒಳ್ಳೆಯ ಮೂಲಭೂತಸೌಕರ್ಯ ಹಾಗೂ ಬಡತನ ನಿರ್ಮೂಲನೆಗೆ ಅಗತ್ಯ ಭಾರಿ ವರಮಾನವನ್ನು ಬಯಸುತ್ತದೆ. ಶೇಕಡ 8.4ರ ವೃದ್ಧಿದರದ ವಾರಸುದಾರಿಕೆಯನ್ನು ಪಡೆದ ಯುಪಿಎ ಸರ್ಕಾರ ಅದನ್ನು ಶೇಕಡ 9ರ ದರ್ಜೆಗೆ ಒಯ್ಯುವ ಬದಲು ಅರ್ಥವ್ಯವಸ್ಥೆಯನ್ನು ಶೇಕಡ ಐದಕ್ಕೂ ಕಮ್ಮಿ ಇಳಿಸಲು ಕಾರಣವೇನು? ಶೇಕಡ ಐದರ ದರದಲ್ಲಿ ಅರ್ಥವ್ಯವಸ್ಥೆ ಬೆಳೆದರೆ ಸಮರ್ಪಕವಾದ ಉದ್ಯೋಗಾವಕಾಶಗಳನ್ನು ಸೃಷ್ಟಿಸಲು ಸಾಧ್ಯವಿಲ್ಲ. ಅದರಿಂದ ಬಡತನವೂ ನಿರ್ಮೂಲನೆಯಾಗದು.

ಕೃಷಿ ವಲಯದ ಮೇಲೆ ಅವಲಂಬಿತ ಬಹುಸಂಖ್ಯೆಯ ಜನಸಂಖ್ಯೆಯನ್ನು ಉತ್ಪಾದನಾ ಕ್ಷೇತ್ರಕ್ಕೆ ವರ್ಗಾಯಿಸುವ ಅಗತ್ಯವಿದೆ. ಅಲ್ಪ ವೆಚ್ಚದ ಉತ್ಪಾದನಾ ಕೇಂದ್ರವನ್ನು ನಿರ್ಮಿಸುವ ಅಗತ್ಯವಿದೆ. ಉತ್ಪಾದನಾ ಕ್ಷೇತ್ರದ ವೃದ್ಧಿ ಪ್ರಮಾಣ ಕನಿಷ್ಠ 12ರಿಂದ 14ರಷ್ಟಿರುವ ಅಗತ್ಯವಿದೆ. ಹೀಗಾದರೆ ಮಾತ್ರ ಉತ್ಪಾದನಾ ಕ್ಷೇತ್ರದ ಮೇಲೆ ನಮ್ಮ ಗಮನ ಹೆಚ್ಚಿಸಿ ಜಿಡಿಪಿಯ ಒಟ್ಟು ಶೇಕಡ 25 ಭಾಗವನ್ನು ಅದು ಆಕ್ರಮಿಸಬೇಕಿದೆ. ಈ ಸನ್ನಿವೇಶ ಉದ್ಭವಿಸಲು ಭಾರಿ ಪ್ರಮಾಣದಲ್ಲಿ ಮೂಲಭೂತಸೌಕರ್ಯ ಕಾರ್ಯಕ್ರಮಗಳನ್ನು ತಕ್ಷಣ ಪ್ರಕಟಿಸುವ ಅಗತ್ಯವಿದೆ.

ರಾಷ್ಟ್ರೀಯ ಹೆದ್ದಾರಿ ಕಾರ್ಯಕ್ರಮದ ವೇಗ ತಗ್ಗಲು ಕಾರಣವೇನು? ಹೆದ್ದಾರಿ ಅಭಿವೃದ್ದಿ ಕಾರ್ಯಕ್ರಮದ ಅನುಷ್ಠಾನದಿಂದ ನಮ್ಮ ಗುತ್ತಿಗೆದಾರರು ಕಾಲು ಕೀಳಲು ಕಾರಣಗಳೇನು? ಎನ್‌ಎಚ್‌ಎಐ ನಿರ್ವಹಿಸಲು ಅಸಾಧ್ಯವಾದ ಸಂಸ್ಥೆಯಾಗಿ ಬೆಳೆಯಲು ಕಾರಣಗಳೇನು? ಹೆದ್ದಾರಿ ಅಭಿವೃದ್ಧಿ ಕಾರ್ಯದಲ್ಲಿರುವವರು ಹೊಸ ಯೋಜನೆಗಳಲ್ಲಿ ಭಾಗವಹಿಸುತ್ತಿಲ್ಲ.

- ಪ್ರಧಾನ ಮಂತ್ರಿ ಗ್ರಾಂ ಸಡಕ್ ಯೋಜನೆಯು ಕಳೆದ ವರ್ಷ ಸ್ಥಗಿತಗೊಳ್ಳುವ ಪರಿಸ್ಥಿತಿಯಲ್ಲಿತ್ತು. ಈ ವರ್ಷ ಒಟ್ಟು 20,000 ಕೋಟಿಯನ್ನು ಈ ಯೋಜನೆಗೆ ಮಂಜೂರು ಮಾಡಿದ್ದರೂ ಈವರೆಗೂ ಖರ್ಚಾಗಿರುವುದು ಕೇವಲ 8000 ಕೋಟಿ ರೂಪಾಯಿ ಮಾತ್ರ.
- ಕಲ್ಲಿದ್ದಲು ನಿಕ್ಷೇಪಗಳ ಹಂಚಿಕೆಯಲ್ಲಿ ಭ್ರಷ್ಟಾಚಾರ ನಡೆದ ಕಾರಣ ವಿದ್ಯುತ್ ಕ್ಷೇತ್ರಕ್ಕೆ ತೊಂದರೆಯಾಗಿದೆ. ವಿದ್ಯುತ್ ಘಟಕಗಳಿಗೆ ಕಲ್ಲಿದ್ದಲು ವಿತರಣೆ ನಿಂತಿದೆ. 2003ರ ವಿದ್ಯುಚ್ಛಕ್ತಿ ಕಾಯಿದೆಯನ್ನು ಜಾರಿಗೆ ತಂದಿದ್ದ ಎನ್‌ಡಿಎ ಸರ್ಕಾರ ವಿದ್ಯುತ್ ಕ್ಷೇತ್ರದಲ್ಲಿ ಯಶಸ್ಸು ಸಾಧಿಸಲು ಕಾರಣವಾಗಿತ್ತು, ಆದರೆ ಇಂದು ಭೀಕರ ವಿದ್ಯುತ್ ಕ್ಷಾಮ ತಲೆದೋರಿದೆ.
- ವಿಶ್ವದಲ್ಲೇ ಅತಿವೇಗದಲ್ಲಿ ಬೆಳೆಯುತ್ತಿದ್ದ ಭಾರತದ ದೂರಸಂಪರ್ಕ ಕ್ಷೇತ್ರವನ್ನು ಇಂದು ಯಾರು ಕೇಳುವವರೇ ಇಲ್ಲ. ಭಾರತೀಯ ದೂರಸಂಪರ್ಕ ತರಂಗಾಂತರ ಮಾರಾಟಯೋಗ್ಯವಿಲ್ಲ.

- ಕೃಷಿ ಅಥವಾ ಉತ್ಪಾದನಾ ಕ್ಷೇತ್ರಕ್ಕೆ ಉತ್ತೇಜನಾ ನೀಡಬಲ್ಲ ಯಾವುದೇ ಪ್ರಸ್ತಾಪ ಮುಂಗಡ ಪತ್ರದಲ್ಲಿಲ್ಲ.
- ಸಕ್ರಿಯರಲ್ಲದ ಸಚಿವರಿಂದ ಏಳು ಲಕ್ಷ ಕೋಟಿ ರೂಪಾಯಿಗಳ ಯೋಜನೆಗಳು ಸ್ಥಗಿತಗೊಂಡಿವೆ.
- ಈಶಾನ್ಯ ಅಭಿವೃದ್ಧಿ ಯೋಜನೆಗಳು ಕಣ್ಮರೆಯಾಗಿವೆ. ಈಶಾನ್ಯ ಪ್ರಾಂತ್ಯ ಕಡೆಗಣನೆಗೆ ಒಳಗಾಗಿದೆ. ಅಕ್ರಮ ವಲಸೆ ಮತ್ತು ಗಡಿ ಅತಿಕ್ರಮ ಪ್ರವೇಶ ಮಾಡಿದವರಿಗೆ ಮಣೆ ಹಾಕುತ್ತಾ ಆಯಾ ಪ್ರದೇಶದ ಜನಾಂಗೀಯ ಸ್ವರೂಪ ಬದಲಾಯಿಸುವಲ್ಲಿ ಮಾತ್ರ ಯುಪಿಎ ಆಸಕ್ತಿವಹಿಸಿದೆ. ಜನಾಂಗೀಯ ಸ್ವರೂಪ ಬದಲಾಯಿಸುವುದೇ ಅದರ ಆದ್ಯತೆಯಾಗಿದ್ದು, ಅಭಿವೃದ್ಧಿ ಕಾರ್ಯಗಳು ನಿರ್ಲಕ್ಷ್ಯಕ್ಕೆ ಒಳಗಾಗಿದೆ.
- ಮಲ ಹೊರುವ ಅನಿಷ್ಠ ಪದ್ಧತಿಯ ನಿರ್ಮೂಲನೆ ಕಾರ್ಯಕ್ರಮ ಹಾಗೂ ನೈರ್ಮಲ್ಯೀಕರಣದ ಸಾರ್ವತ್ರೀಕರಣಕ್ಕೆ ಆದ್ಯತೆ ನೀಡುವ ಅಗತ್ಯವಿದೆ.
- ರಾಷ್ಟ್ರೀಯ ಸಂಪನ್ಮೂಲವನ್ನು ವ್ಯರ್ಥ ಮಾಡಿದ ಯುಪಿಎ ಸರ್ಕಾರ ಆರ್ಥಿಕ ಶಿಸ್ತನ್ನು ಪಾಲಿಸದೆ, ದೇಶವನ್ನು ಇಂದು ಸಾಲದ ದವಡೆಗೆ ದೂಡಿದೆ. ಸಮಾಜ ಕಲ್ಯಾಣದ ಎಲ್ಲಾ ಯೋಜನೆಗಳಿಗೆ ನೀಡಬೇಕಾದ ಅನುದಾನದಲ್ಲಿ ಭಾರಿ ಕಡಿತ ಮಾಡುವ ಮೂಲಕ ಹೊರನೋಟಕ್ಕೆ ವಿತ್ತೀಯ ಕೊರತೆಯನ್ನು ಸಮರ್ಥಿಸಿಕೊಳ್ಳುವ ಮಟ್ಟಕ್ಕೆ ತರುವ ಪ್ರಯತ್ನ ನಡೆದಿದೆ ಹಾಗೂ ಹೂಡಿಕೆ ವೆಚ್ಚವನ್ನು 93,000 ಕೋಟಿಯಷ್ಟು ಕಡಿತಗೊಳಿಸಲಾಗಿದೆ. ಆಹಾರ ಭದ್ರತಾ ಮಸೂದೆ ಜಾರಿಗೆ ತರಲು ಸಾಕಷ್ಟು ಹಣವೇ ಉಳಿದಿಲ್ಲ. ಇದಕ್ಕಾಗಿ ನಿಗದಿ ಪಡಿಸಿದ ಮೊತ್ತ ಕೇವಲ ಕನಿಷ್ಠ 5000 ಕೋಟಿ ರೂಪಾಯಿಯಷ್ಟು ಏರಿಸಲಾಗಿದೆ. ಮಹಾತ್ಮಗಾಂಧಿ ನರೇಗಾ ಕಾರ್ಯಕ್ರಮಕ್ಕೆ ನೀಡಿದ ಅನುದಾನ ಮತ್ತು ಗ್ರಾಮೀಣ ರಸ್ತೆಗಳ ನಿರ್ಮಾಣಕ್ಕೆ ಮಂಜೂರಾದ ಮೊತ್ತದಲ್ಲಿ ಅಗಾಧ ಪ್ರಮಾಣದ ಕಡಿತವಾಗಿದೆ. ಕಾಯಕಲ್ಪ ಮಾಡಬಲ್ಲ ನೇರ ನಗದು ವರ್ಗಾವಣೆ ಯೋಜನೆಗೆ ಮುಂದಿನ ವರ್ಷ ಕೇವಲ 5601 ಕೋಟಿ ರೂಪಾಯಿ ನೀಡಲಾಗಿದೆ.
- ಆಹಾರ ಭದ್ರತಾ ಮಸೂದೆ ಭ್ರಮನಿರಸನವಾಗಿದೆ. ಸಾರ್ವತ್ರಿಕವಾದ ವರ್ಗೀಕೃತ ಆಹಾರ ಭದ್ರತೆ ಮಾದರಿಯನ್ನು ಛತ್ತೀಸಘಡ್ ಅಭಿವೃದ್ಧಿ ಪಡಿಸಿದೆ. ಕಳೆದ ವರ್ಷ ಆಹಾರ ವಿನಾಯತಿಗಾಗಿ 75,000 ಕೋಟಿ ಮಂಜೂರು ಮಾಡುವ ಪ್ರಸ್ತಾಪವಿತ್ತು ಆದರೆ ಇದಕ್ಕೆ ವೆಚ್ಚವಾದ ವಾಸ್ತವಿಕ ಮೊತ್ತವೆಂದರೆ 85,000 ಕೋಟಿ ರೂಪಾಯಿಗಳು. ಮುಂದಿನ ವರ್ಷ ಈ ಉದ್ದೇಶಕ್ಕಾಗಿ ಇಡಲಾದ ಮೊತ್ತವನ್ನು ಕೇವಲ 5000 ಕೋಟಿಯಷ್ಟು ಹೆಚ್ಚಿಸಲಾಗಿದೆ (10,000 ಕೋಟಿ ರೂಪಾಯಿಯಲ್ಲ) ಅಂದರೆ, 85,000 ಕೋಟಿ ರೂಪಾಯಿ+10,000 ಕೋಟಿ ರೂಪಾಯಿ). ಆಹಾರ ಭದ್ರತೆ ಕುರಿತು ದೆಹಲಿಯಲ್ಲಿ ಕೇವಲ ಚರ್ಚೆ ನಡೆದಿದೆ. ಇದಕ್ಕೆ ತದ್ವಿರುದ್ಧವಾಗಿ ಎನ್‌ಡಿಎ ಆಳ್ವಿಕೆಯಿರುವ ರಾಜ್ಯಗಳಲ್ಲಿ ಅಸಾಧಾರಣ ಸಾಧನೆಯಾಗಿದೆ. ಬಿಹಾರ್ ಶೇಕಡ 12ರ ಜಿಡಿಪಿ ವೃದ್ಧಿ ದರ ಹೊಂದಿದೆ. ಮಧ್ಯಪ್ರದೇಶ, ಗುಜರಾತ್ ಹಾಗೂ ಛತ್ತೀಸ್‌ಘಡ್ ರಾಜ್ಯಗಳು ಸುಮಾರು ಎರಡಂಕಿ ವೃದ್ಧಿ ದರ ಹೊಂದಿವೆ. ಮಧ್ಯಪ್ರದೇಶ್ ಮತ್ತು ಗುಜರಾತ್ ರಾಜ್ಯಗಳಲ್ಲಿ ಕೃಷಿ ಉತ್ಪಾದನೆ ಅಗಾಧ ಬೆಳವಣಿಗೆ ಹೊಂದಿದೆ.

**ಭ್ರಷ್ಟಾಚಾರ**

ಸರ್ಕಾರದ ನಾಯಕತ್ವ ನಿಯಂತ್ರಣ ಹೊಂದದೆ ಇರುವುದರಿಂದ, ಭ್ರಷ್ಟಾಚಾರವೇ ಯುಪಿಎ ಸರ್ಕಾರದ ಸಾಧನೆಯ ಪ್ರಮುಖ ಲಕ್ಷಣವಾಗಿದೆ. ಯುಪಿಎ ವಿವಿಧ ಬಗೆಯ ಸಚಿವರನ್ನು ಹೊಂದಿದೆ. ಕೆಲವರು ಅಹಂಕಾರಿಗಳು, ಕೆಲವರು ವಿಪರೀತ ಭ್ರಷ್ಟರು, ಮತ್ತೆ ಕೆಲವರು ಸಕ್ರಿಯರಾಗಿಲ್ಲ ಹಾಗೂ ಅನ್ಯರು ಕೆಲಸವನ್ನೇ ಮಾಡುವುದಿಲ್ಲ. ಇನ್ನು ಕೆಲವರಿದ್ದಾರೆ, ಅವರ ನಾಲಿಗೆ ಸದಾ ಒಂದಲ್ಲಾ ಒಂದು ರೀತಿಯಲ್ಲಿ ಜಾರುತ್ತಿರುತ್ತದೆ. ಹೂಗುಚ್ಛದ ಜಾಗದಲ್ಲಿ ಈಗ ಹೂಕುಂಡವಿದೆ. ಭ್ರಷ್ಟಾಚಾರವು ಬಂಡವಾಳ ಹರಿವು ತಾಣವಾಗಿದ್ದ ಭಾರತದ ಸಾಮರ್ಥ್ಯವನ್ನು ಕುಗ್ಗಿಸುತ್ತಿದೆ. ಕೇವಲ ಅಂತಾರಾಷ್ಟ್ರೀಯ ಹೂಡಿಕೆದಾರರು ಭಾರತದಲ್ಲಿ ಬಂಡವಾಳ ಹೂಡಲು ಹಿಂದೇಟು ಹಾಕುತ್ತಿಲ್ಲ, ದೇಶೀಯ ಹೂಡಿಕೆದಾರರು ಸಹ ವಿಶ್ವದ ಇತರೆಡೆ ಲಭ್ಯವಿರುವ ಉತ್ತಮ ಹೂಡಿಕೆ ಅವಕಾಶಗಳನ್ನೇ ಬಯಸಿದ್ದಾರೆ. ಬಂಡವಾಳದ ಪಲಾಯನದಿಂದ ಭಾರತೀಯ ಅರ್ಥವ್ಯವಸ್ಥೆ ಪ್ರತಿಕೂಲ ಪರಿಸ್ಥಿತಿಯನ್ನು ಎದುರಿಸುತ್ತಿದೆ.

ಭಾರತದ ಕ್ರೀಡಾ ಮತ್ತು ಪ್ರವಾಸೋದ್ಯಮಕ್ಕೆ ಉತ್ತೇಜನ ನೀಡುವ ಬದಲು, ಕಾಮನ್‌ವೆಲ್ತ್ ಕ್ರೀಡಾಕೂಟವು ಭ್ರಷ್ಟಾಚಾರಕ್ಕಾಗಿ ಹೆಚ್ಚು ಪ್ರಚಲಿತಗೊಂಡಿತು. ಯುಪಿಎ ನಾಯಕರಿಗೆ ಜೈಲಾಗಿದೆ ಹಾಗೂ ದೇಶದ ಕ್ರೀಡಾ ಕ್ಷೇತ್ರಕ್ಕೆ ತೊಡಕುಂಟಾಗಿದೆ.

2ಜಿ ತರಂಗಾಂತರ ಹಂಚಿಕೆ ಹಗರಣದಲ್ಲೂ ಓರ್ವ ಕೇಂದ್ರ ಸಚಿವರಿಗೆ ಮತ್ತು ಅನ್ಯರಿಗೆ ಜೈಲಾಗಿದೆ. ಅಗಾಧ ಪ್ರಮಾಣದ ನೈಸರ್ಗಿಕ ಸಂಪನ್ಮೂಲವನ್ನು ವ್ಯರ್ಥ ಮಾಡಲಾಗಿದೆ. ದೂರಸಂಪರ್ಕ ಕ್ಷೇತ್ರದಲ್ಲಿ ಸಾಧಿಸಿದ ಯಶಸ್ಸು ಮಾಯವಾಗಿದೆ. ಕಲ್ಲಿದ್ದಲು ಹಂಚಿಕೆ ಹಗರಣದಲ್ಲಿ ಅತ್ಯಮೂಲ್ಯ ನೈಸರ್ಗಿಕ ಸಂಪನ್ಮೂಲವನ್ನು ಅಪಮೌಲ್ಯಗೊಳಿಸಿದ ಬೆಲೆಗೆ, ತಮಗೆ ತೋಚಿದ ರೀತಿ, ಹಂಚಲಾಯಿತು. ಇದರಿಂದ, ವಿದ್ಯುತ್ ಶಾಖೋತ್ಪನ್ನಗಳಿಗೆ ಕಲ್ಲಿದ್ದಲಿನ ಕೊರತೆಯುಂಟಾಗಿ ವಿದ್ಯುತ್ ಕ್ಷೇತ್ರ ಕುಂಠಿತಗೊಂಡಿತು.

ಅತಿ ಗಣ್ಯರ ಹೆಲಿಕಾಪ್ಟರ್ ಖರೀದಿ ವ್ಯವಹಾರದಲ್ಲೂ ಲಂಚ ಸ್ವೀಕರಿಸಿದ ಹಗರಣವನ್ನು ಮುಚ್ಚಿಡುವ ಪ್ರಯತ್ನ ಮಾಡಲಾಯಿತು. ನಾವು ಕೇಳುತ್ತಿರುವುದು ಕೇವಲ ಲಂಚಪಡೆದವರ ಹೆಸರುಗಳನ್ನು. ಅವರಿಗೆ ಶಿಕ್ಷೆಯಾಗಲೇಬೇಕು. ಈ ವಿಚಾರದ ಸತ್ಯಾಸತ್ಯತೆಯನ್ನು ಮರೆಮಾಚುವ ಯತ್ನದಲ್ಲಿ ವಿವಾದವನ್ನು ಸಂಸದೀಯ ಸಮಿತಿಗೆ ಒಪ್ಪಿಸಿದ್ದು, ಇದರಿಂದ ಗೊಂದಲ ಸೃಷ್ಟಿಸುವ ಪ್ರಯತ್ನವನ್ನು ಸರ್ಕಾರ ಮಾಡಿದೆ. ಸಂಸದರು ವಿಚಾರದ ತನಿಖೆ ನಡೆಸುವ, ಬಂಧನದಲ್ಲಿರಿಸಿ ವಿಚಾರಣೆ ನಡೆಸುವ ಅಥವಾ ಪತ್ರ ವ್ಯವಹಾರ ನಡೆಸುವ ಅಧಿಕಾರ ಹೊಂದಿಲ್ಲ.

ಬಲಿಷ್ಠ ಹೊಣೆಗಾರಿಕೆ ವ್ಯವಸ್ಥೆ ಬೇಕೆಂಬ ರಾಷ್ಟ್ರೀಯ ಅಭಿಲಾಷೆ ಈಡೇರಿಸಲು ಬೃಹತ್ ಪ್ರತಿಭಟನೆಗಳನ್ನು ದೇಶದಲ್ಲಿ ನಡೆಸಲಾಯಿತು. ಲೋಕಪಾಲ್ ಮಸೂದೆಯನ್ನು ಲೋಕಸಭೆಯಲ್ಲಿ ಅತಿ ಅವಸರದಲ್ಲಿ ಅಂಗೀಕರಿಸಲಾಯಿತು ಆದರೆ ರಾಜ್ಯ ಸಭೆಯಲ್ಲಿ ಸರ್ಕಾರ ಅದಕ್ಕೆ ಅಡ್ಡಿಪಡಿಸಿತು. ಮಸೂದೆಯನ್ನು ಹೆಚ್ಚು ಬಲಿಷ್ಠಗೊಳಿಸಲು ಆಯ್ಕೆ ಸಮಿತಿ ಪ್ರಕ್ರಿಯೆ ಅನುಸರಿಸುವಂತೆ ನಾವು ಮಾಡಿದ ಪ್ರಯತ್ನಗಳನ್ನು ಸರ್ಕಾರ ವಿರೋಧಿಸಿದೆ; ಕೆಲವು ಸಲಹೆಗಳನ್ನು ಒಪ್ಪಲಾಗಿದೆ ಆದರೆ ಇನ್ನು ಕೆಲವು ಪ್ರಮುಖ ಸಲಹೆಗಳನ್ನು ತಡೆಯಲಾಗಿದೆ.

- ಲೋಕಪಾಲರು ವಿಚಾರಣೆ ಆರಂಭಿಸುವ ಮುನ್ನವೇ ಭ್ರಷ್ಟಾಚಾರ ಅರೋಪ ಎದುರಿಸುವ ಅಧಿಕಾರಿಗೆ ತನ್ನ ಪಕ್ಷದಲ್ಲಿ ಸ್ಪಷ್ಟನೆ ನೀಡುವ ಅವಕಾಶ ಕಲ್ಪಿಸಿದರೆ, ತನಿಖೆಗೆ ಆವಶ್ಯಕವೆನಿಸುವ ಗೌಪ್ಯತೆ ಹಾಗೂ ಧಿಡೀರ್ ಧಾಳಿಯ ಉದ್ದೇಶ ನಾಶವಾಗುತ್ತದೆ.
- ಲೋಕಪಾಲರ ಅನುಮತಿಯಿಲ್ಲದೆ ತನಿಖೆಗೆ ಒಳಪಡುವ ಅಧಿಕಾರಿಯನ್ನು ಸರ್ಕಾರ ವರ್ಗಾಯಿಸುವ ಅಗತ್ಯವೇನಿದೆ?
- ಸಿಬಿಐನಂತಹ ತನಿಖಾ ಸಂಸ್ಥೆಯ ಮುಖ್ಯಸ್ಥರು ನಿರ್ಭಯ ಮತ್ತು ನಿಶ್ಪಕ್ಷಪಾತದಿಂದ ಕಾರ್ಯವಹಿಸಬೇಕು. ಅವರಿಗೆ ನಿರ್ದಿಷ್ಟ ಅಧಿಕಾರಾವಧಿಯಿದ್ದು, ನಿವೃತ್ತಿ ನಂತರದ ನೇಮಕಾತಿಯ ಪ್ರಲೋಭನೆ ಹೊಂದಿರಬಾರದು.

ಭಾರತದ ರಾಜ ವ್ಯವಸ್ಥೆ ಗಾಂಭೀರ್ಯತೆ ಪ್ರದರ್ಶಿಸಿ, ಭ್ರಷ್ಟರನ್ನು ತ್ವರಿತಗತಿಯಲ್ಲಿ ಶಿಕ್ಷಿಸುವ ಕಾರ್ಯ ಆರಂಭಿಸಬೇಕು.

**ಪ್ರವಾಸೋಧ್ಯಮ, ದಂಗೆ ಮತ್ತು ರಾಷ್ಟ್ರೀಯ ಭದ್ರತೆ**

ಕಾಶ್ಮೀರ ಭಾರತದ ಅವಿಭಾಜ್ಯ ಅಂಗವಾಗಿದೆ. ಇತ್ತೀಚೆಗೆ ಅಲ್ಲಿ ಶಾಂತಿ ಮರಳಿದೆ. ಭಾರತದೊಂದಿಗೆ ಜಮ್ಮು ಹಾಗೂ ಕಾಶ್ಮೀರದ ಪ್ರಾದೇಶಿಕ ಸಮನ್ವಯದ ಕುರಿತು ಗಡಿಯಾಚೆ ಅಥವಾ ಒಳಗಿನಿಂದ ಉದ್ಭವಿಸುವ ಯಾವುದೇ ಸಲಹೆ ಅಥವಾ ಸಮಾಲೋಚನೆಗೆ ಭಾರತ ಸರ್ಕಾರ ಅವಕಾಶ ನೀಡಬಾರದು. ಜಮ್ಮು ಹಾಗೂ ಕಾಶ್ಮೀರದ ಜನರ ಕುರಿತು ಕರುಣೆ, ಅನುಕಂಪದೊಂದಿಗೆ ವರ್ತಿಸಬೇಕು. ಅಭಿವೃದ್ಧಿ ಮತ್ತು ಸಮಗ್ರತೆ ನಮ್ಮ ಗುರಿಯಾಗಿರಬೇಕು. ಜನಪರ ಹಾಗೂ ಪ್ರತ್ಯೇಕತಾವಾದಿಗಳ ವಿರುದ್ಧದ ನೀತಿಯನ್ನು ಅನುಸರಿಸಬೇಕು.

2001ರ ಸಂಸತ್ ಧಾಳಿಯ ರೂವಾರಿಗೆ ಶಿಕ್ಷೆ ವಿಧಿಸಿದ ಕುರಿತು ಕಣಿವೆಯ ರಾಜಕಾರಣಿಗಳಿಂದ ಬಂದ ಪ್ರತಿಕ್ರಿಯೆ ಕಳವಳಕಾರಿಯಾಗಿದೆ. ಭಾರತ ಮೃದು ರಾಷ್ಟ್ರವಲ್ಲ. ಪ್ರತ್ಯೇಕತಾವಾದಿಗಳ ಒತ್ತಡಕ್ಕೆ ಮಣಿದು ಭಾರತದ ಸಾರ್ವಭೌಮತೆ ಹಾಗೂ ಸಮಗ್ರತೆಗೆ ಧಕ್ಕೆವುಂಟುಮಾಡುವವರನ್ನು ಶಿಕ್ಷೆಗೆ ಗುರಿಪಡಿಸದು ಎಂಬ ಸಂದೇಶವನ್ನು ರವಾನಿಸಲಾಗದು.

ಭಾರತೀಯ ಪ್ರಜಾಪ್ರಭುತ್ವಕ್ಕೆ ಮಾವೋವಾದಿಗಳ ಅಹಿಂಸೆ ಅವಮಾನಕರ.

ಅಹಿಂಸೆಯ ಮೂಲಕ ಸಂಸದೀಯ ಪ್ರಜಾಪ್ರಭುತ್ವವನ್ನು ಕಿತ್ತೊಗೆಯುವ ಬೆದರಿಕೆಯನ್ನು ಮಾವೋವಾದಿಗಳು ಒಡ್ಡಿದ್ದಾರೆ. ಪರಿಶಿಷ್ಟ ಪಂಗಡಗಳ ಬಡತನವನ್ನೇ ಅಸ್ತ್ರವಾಗಿ ಬಳಿಸಿ ಅವರ ಶೋಷಣೆ ಮಾಡುತ್ತಿದ್ದಾರೆ. ರಾಷ್ಟ್ರೀಯ ಸಂಪನ್ಮೂಲಗಳ ಮೇಲಿನ ಮೊದಲ ಹಕ್ಕು ಪರಿಶಿಷ್ಟ ಪಂಗಡದ ವಾಸಸ್ಥಳಗಳಿಗೆ ನೀಡುವ ರಾಷ್ಟ್ರೀಯ ನೀತಿಯನ್ನು ಜಾರಿಗೆ ತರಬೇಕು. ಈ ಪ್ರದೇಶಗಳ ಸಮಗ್ರ ಅಭಿವೃದ್ಧಿಗೆ ಸರ್ವಸಮ್ಮತ ಕಾನೂನು ಸುವ್ಯವಸ್ಥೆ ಜಾರಿಗೆ ಬರಬೇಕು. ಮಾವೋವಾದಿಗಳು ಸೋಂಕಿತ ಪ್ರದೇಶವನ್ನು ಮುಕ್ತಗೊಳಿಸಲು ಅಭಿವೃದ್ಧಿ ಪ್ರಚಾರ ಹಾಗೂ ಸಮರ್ಪಕವಾದ ಭದ್ರತಾ ಯಂತ್ರವನ್ನು ರೂಪಿಸಬೇಕು.

**<u>ಹೈದರಾಬಾದ್ ಸ್ಫೋಟ</u>**

ಹೈದರಾಬಾದಿನಲ್ಲಿ ಇತ್ತೀಚೆಗೆ ಸಂಭವಿಸಿದ ಬಾಂಬ್ ಸ್ಫೋಟದಲ್ಲಿ ಹಲವರು ಅಸುನೀಗಿದ್ದಾರೆ ಮತ್ತು ಹಲವರಿಗೆ ಗಾಯಗಳಾಗಿವೆ. ಬಲಿಷ್ಠ ಗುಪ್ತಚರ್ಯೆ ವಿಭಾಗ ಮತ್ತು ಭಯೋತ್ಪಾದನಾ ಗತಿವಿಧಿಗಳನ್ನು ಭೇದಿಸುವ ಸಾಮರ್ಥ್ಯ ವೃದ್ಧಿಯಿಂದಲೇ ಭಯೋತ್ಪಾದನೆಗೆ ಕಡಿವಾಣ ಹಾಕಬಹುದು. ಭಯೋತ್ಪಾದಕರು ಕೇವಲ ಒಮ್ಮೆ ಯಶಸ್ವಿಯಾಗುತ್ತಾರೆ. ಕೃತ್ಯ ಎಸಗುವ ಕುರಿತು ಹೈದರಾಬಾದಿನಲ್ಲಿ ಗುಪ್ತ ಸಮಾಲೋಚನೆ ನಡೆಯುತ್ತಿರುವ ಬಗ್ಗೆ ಸಮರ್ಪಕ ಮಾಹಿತಿ ಲಭ್ಯವಿದ್ದರೂ ಆ ಕುರಿತು ನಮ್ಮ ಗುಪ್ತಚರ ವಿಭಾಗ ಮತ್ತು ಭದ್ರತಾ ಪಡೆಗಳು ನಿರ್ಲಕ್ಷ್ಯ ತೋರಿದವೇ? ಹೈದರಾಬಾದನ್ನು ಭೀತಿ ಮುಕ್ತಗೊಳಿಸುವ ಅಗತ್ಯವಿದೆಯೆ? ಭಾರತ ತನ್ನ ಎಚ್ಚರಿಕಾ ಸಿದ್ಧತೆಗಳನ್ನು ಸಡಿಲಿಸುವಂತಿಲ್ಲ ಎಂಬುದಕ್ಕೆ ಹೈದರಾಬಾದ್ ಸ್ಫೋಟವೇ ಸಾಕ್ಷಿ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಒಟ್ಟು ಸೇರಿ ಭಯೊತ್ಪಾದನೆ ವಿರುದ್ಧ ಸೆಣಸಬೇಕು. ಭಯೋತ್ಪಾದನೆ ಮತ್ತು ಒಕ್ಕೂಟ ವ್ಯವಸ್ಥೆ ಕುರಿತು ಉದ್ಭವಿಸಿರುವ ಕೃತ್ರಿಮ ವಾದ ವಿವಾದ ನಿಲ್ಲಬೇಕು; ಇವೆರಡೂ ಜೊತೆಗೆ ಸಹಕರಿಸಬಹುದು. ಎನ್‌ಸಿಟಿಸಿ ಈ ಒಂದು ನಂಬಿಕೆ ಮೇಲೆ ಕಾರ್ಯವಹಿಸಬೇಕು.

**<u>ಭಾರತ ಹಾಗೂ ನೆರೆರಾಷ್ಟ್ರಗಳು</u>**

ನೆರೆ ರಾಷ್ಟ್ರಗಳ ಆಂತರಿಕ ವ್ಯವಹಾರಗಳ ಕುರಿತು ಭಾರತ ಎಂದೂ ಹಸ್ತಕ್ಷೇಪ ಮಾಡಿಲ್ಲ. ಅವರೊಂದಿಗೆ ಒಳ್ಳೆಯ ಸಂಬಂಧ ಉಳಿಸಿಕೊಳ್ಳುವ ಇಂಗಿತ ನಮ್ಮದು ಹಾಗೂ ಈ ಪ್ರದೇಶದ ಸ್ಥಿರತೆಯಲ್ಲಿ ನಂಬಿಕೆ ಇಟ್ಟಿದ್ದೇವೆ. ಪಾಕಿಸ್ತಾನ ಗದ್ದಲದಿಂದ ಕೂಡಿದ ರಾಷ್ಟ್ರವಾಗಿದೆ. ಆ ರಾಷ್ಟ್ರವನ್ನು ನಿಯಂತ್ರಿಸುವ ಅಂಗ ಯಾವುದು ಎಂಬುದೇ ಅಲ್ಲಿರುವ ವೀಕ್ಷಕರಿಗೆ ಅರ್ಥವಾಗುತ್ತಿಲ್ಲ. ಪಾಕಿಸ್ತಾನದೊಂದಿಗೆ ಸಮಾಲೋಚನೆ ನಡೆಸುವ ವಿಶ್ವಾಸವನ್ನು ಪ್ರಧಾನಿಗಳು ವ್ಯಕ್ತಪಡಿಸಿದ್ದಾರೆ. ಇತ್ತೀಚೆಗೆ ನಡೆದ ಕೆಲವು ವಿಕೃತ ಬೆಳವಣಿಗೆಗಳ ನಂತರ ಪ್ರಧಾನಿಗಳು ತಮ್ಮ ವಿಶ್ವಾಸವನ್ನು ತಡೆಹಿಡಿದಿದ್ದಾರೆ ಎಂಬ ಆಶಯ ನನ್ನದು.

ಭಾರತ ಹಾಗೂ ಚೀನಾ ನಡುವೆಯಿರುವ ನೇಪಾಳ ಪ್ರಮುಖ ದೇಶವಾಗಿದೆ. ಸಾಂಸ್ಕೃತಿಕ ಹಾಗೂ ಧಾರ್ಮಿಕವಾದ ಐತಿಹಾಸಿಕ ಸಂಬಂಧವನ್ನು ಆ ದೇಶದೊಂದಿಗೆ ಹೊಂದಿದ್ದೇವೆ. ಅಲ್ಲಿ ಉದ್ಭವಿಸಿರುವ ಸಂವೈಧಾನಿಕ ಬಿಕ್ಕಟ್ಟು ಕಳವಳದ ವಿಷಯವಾಗಿದೆ.

ಬಾಂಗ್ಲದೇಶದಲ್ಲಿ ಪ್ರಸ್ತುತ ಭಾರತ ಸ್ನೇಹಿ ರಾಜ ವ್ಯವಸ್ಥೆಯಿದೆ. ದೇಶೀಯ ಜನರ ಆಶಯಗಳಿಗೆ ಅನುರೂಪವಾಗಿ ಎರಡೂ ರಾಷ್ಟ್ರಗಳ ನಡುವೆಯಿರುವ ದ್ವಿಪಕ್ಷೀಯ ವಿಚಾರಗಳನ್ನು ಬಗೆಹರಿಸಲು ಇದೇ ಸುಸಂದರ್ಭವಾಗಿದೆ.

ಶ್ರೀಲಂಕಾ ಭಾರತದ ಮಿತ್ರ ರಾಷ್ಟ್ರವಾಗಿದೆ. ಶ್ರೀಲಂಕಾದಲ್ಲಿ ಶಾಂತಿ ನೆಲೆಸಲು ನಮ್ಮ ಸೈನಿಕರು ರಕ್ತ ತೆತ್ತಿದ್ದಾರೆ. ಶ್ರೀಲಂಕಾದಲ್ಲಿ ಮಾನವ ಹಕ್ಕು ಉಲ್ಲಂಘನೆಯಿಂದ ತಮಿಳುನಾಡು ಹಾಗೂ ಕೆಲವು ಅನ್ಯ ಪ್ರದೇಶಗಳು ಪ್ರಭಾವಿತಗೊಂಡ ಕಾರಣ ಶ್ರೀಲಂಕಾ ಕುರಿತಂತೆ ನಾವು ಸ್ವಾಭಾವಿಕವಾದ ಅಸಕ್ತಿ ವಹಿಸಿದ್ದೇವೆ.

**<u>ಮಾಲ್ಡೀವ್ಸ್</u>:** ಮಾಲ್ಡೀವ್ಸ್‌ನಲ್ಲಿ ಉದ್ಭವಿಸಿರುವ ಸನ್ನಿವೇಶ ಚಿಂತಾಜನಕವಾಗಿದೆ. ಹಿಂದು ಮಹಾಸಾಗರದಲ್ಲಿ ಅಶಾಂತಿ ಸಹಿಸಲು ಸಾಧ್ಯವಿಲ್ಲ. ಆ ದೇಶದ ಮಾಜಿ ರಾಷ್ಟ್ರಪತಿ ಭಾರತೀಯ ರಾಯಭಾರಿ ಕಚೇರಿಯಲ್ಲಿ ಆಶ್ರಯ ಪಡೆಯುವ ಮಟ್ಟಕ್ಕೆ ಅಲ್ಲಿಯ ಪರಿಸ್ಥಿತಿ ಹದಗೆಟ್ಟಿದೆ. ಈ ಬಿಕ್ಕಟ್ಟು ಅತಿ ಶೀಘ್ರವಾಗಿ ಬಗೆಹರಿಯುವ ಸಂಕಲ್ಪವನ್ನು ಭಾರತ ಹೊಂದಿದೆ. ಮಾಲ್ಡೀವ್ಸ್‌ನಲ್ಲಿ ಪ್ರಜಾಪ್ರಭುತ್ವ ನೆಲೆಗೊಳ್ಳುವವರೆಗೂ ಪರಿಸ್ಥಿತಿ ನಿಭಾಯಿಸುವ ಆವಶ್ಯಕತೆ ಭಾರತಕ್ಕಿದೆ.

**ಮಹಿಳೆ**

ಭಾರತೀಯ ಸಮಾಜದಲ್ಲಿ ಮಹಿಳೆಯರ ಸಂಖ್ಯೆ ಶೇಕಡ 50ರಷ್ಟಿದೆ. ಸಮಾಜದ ಶೋಷಿತ ವರ್ಗಕ್ಕೆ ಅವರು ಸೇರಿರುವ ವಾಸ್ತವಿಕ ಆಂಶವನ್ನು ಅಲ್ಲಗಳೆಯುವಂತಿಲ್ಲ. ಅವರು ಹುಟ್ಟಿದಾಗಿನಿಂದ ಸಮಾಜ ಕೀಳು ಭಾವನೆಯಿಂದ ನೋಡುತ್ತದೆ. ಸಂವಿಧಾನಬದ್ಧ ಸಮಾನತೆಯನ್ನು ಮಹಿಳೆಯರಿಗೆ ನೀಡಲಾಗಿದೆ, ಆದರೆ ಮಹಿಳೆಯರ ಪ್ರತಿ ಸಮಾಜದ ಮನಸ್ಥಿತಿ ಬದಲಾಗಬೇಕಿದೆ. ಸಮಾಜದ ವಿಕಾಸದಲ್ಲಿ ಮಹಿಳೆಯರು ಸಮಪಾಲು ಹೊಂದಿದ್ದಾರೆ ಎಂಬ ನಂಬಿಕೆ ಮೂಡಬೇಕಿದೆ. ದೆಹಲಿಯಲ್ಲಿ ನಡೆದ ಅತ್ಯಾಚಾರ ಮತ್ತು ಕೊಲೆಯ ಪ್ರಕರಣ ಮತ್ತು ಇಂತಹ ಕೆಲವು ಅನ್ಯ ಪ್ರಕರಣಗಳು ನಾಚಿಕೆಯಿಂದ ನಮ್ಮ ಶಿರಬಾಗುವಂತೆ ಮಾಡಿವೆ. ನಮ್ಮ ಕಾನೂನಿನಲ್ಲಿರುವ ಲೋಪಗಳನ್ನು ಸರಿಪಡಿಸಬಹುದು. ಆದರೆ ನಮ್ಮ ಪೋಲಿಸ್ ಯಂತ್ರ, ನಮ್ಮ ತನಿಖಾ ವಿಧಾನ ಮತ್ತು ಸಮಾಜದಲ್ಲಿ ವಿಶೇಷವಾಗಿ ಪುರುಷರ ವರ್ತನೆ ಗಣನೀಯ ಸುಧಾರಣೆ ಕಾಣಬೇಕಿದೆ. ಸಜ್ಜನಿಕೆಯ ಪರೀಕ್ಷೆಯಲ್ಲಿ ಸಂಪೂರ್ಣ ಸೋತಿರುವ ಸಂಕೇತವನ್ನು ಈ ಘಟನೆಗಳು ನೀಡುತ್ತವೆ. ನಾಗರೀಕತೆಯ ಉಳಿವಿಗಾಗಿ, ಈ ವಿಚಾರದಲ್ಲಿ ನಾವು ಸೋಲುವಂತಿಲ್ಲ.

ಯುಪಿಎ ನಿರ್ಮಿಸುವ ಹಾದಿಯಲ್ಲಿದೆ. ಅರ್ಥವ್ಯವಸ್ಥೆಯನ್ನು ವಿನಾಶದ ಅಂಚಿಗೆ ತಂದು ನಿಲ್ಲಿಸಿ ಅವರು ತೆರಳುತ್ತಿದ್ದಾರೆ. ರಾಜವ್ಯವಸ್ಥೆಯಲ್ಲಿ ಅವಿಶ್ವಾಸ ಮೂಡುವಂತೆ ನಡೆದುಕೊಂಡಿದೆ. ಸಿನಿಕರ ಈ ಒಂದು ವಾತಾವರಣದಲ್ಲಿ ಭಾರತವನ್ನು ವಂಶಾವಳಿ ಪ್ರಜಾಪ್ರಭುತ್ವದ ಕಡೆ ದೂಡಬಹುದೆಂದು ಯುಪಿಎ ನಂಬಿರುವ ಪರಿಹಾರ ಸಫಲವಾಗದು. ರಾಜಕೀಯ ವಂಶಾವಳಿಗಳ ಪ್ರಭಾವವನ್ನು ಸಂಪೂರ್ಣ ನುಚ್ಚುನೂರು ಮಾಡಿದರೆ ಮಾತ್ರ ಭಾರತದ ನೈಜ ಸತ್ವ ಹೊರಹೊಮ್ಮಲು ಸಾಧ್ಯ. ರುಜುವಾತಾದ ಸಾಮರ್ಥ್ಯ ಹಾಗೂ ಭಾರತವನ್ನು ವಂಶಾವಳಿ ಪ್ರಜಾಪ್ರಭುತ್ವವನ್ನಾಗಿ ಮಾಡಹೊರಟಿರುವವರ ನಡುವೆ ಏರ್ಪಡುವ ರಾಜಕೀಯ ಸ್ಪರ್ದೆಗೆ ಭಾರತ ಸಾಕ್ಷಿಯಾಗಲಿ. ರುಜುವಾತಾದ ಸಾಮರ್ಥ್ಯದಿಂದಲೆ ಭಾರತವನ್ನು ಸಿನಿಕತನದಿಂದ ವಿಶ್ವಾಸದ ಕಡೆ ನಡೆಸಲು ಸಾಧ್ಯ.

ಸಾಧನೆ ಮಾಡದ ಹಾಗೂ ಭ್ರಷ್ಟ ಸರ್ಕಾರ ದೇಶಕ್ಕೆ ಭಾರಿ ನಷ್ಟ ಮಾಡಲು ಸಾಧ್ಯ. ಪುರಾತನ ರೋಮನ್ ಸಚಿವನಾಗಿದ್ದ ಟೆಸಿಟಸ್ ಅವರು ಈ ವಿಚಾರದ ಗಹನೆಯನ್ನು ತಮ್ಮ ಮಾತುಗಳಲ್ಲಿ ಸ್ಪಷ್ಟವಾಗಿ ಹೀಗೆ ತಿಳಿಸಿದ್ದಾರೆ:–

*"They have plundered the world, stripping naked the land in their hunger…. Theyare driven by greed, if their enemy be rich; by ambition, if poor… They ravage , they slaughter, they seize by false pretenses, and all of this they hail as the construction of empire. And when in their wake nothing remains but a desert, they call that peace."*

**(ಆರ್.ಕೆ.ಸಿನ್ಹ)**

ಕಾರ್ಯದರ್ಶಿ

ಭಾಜಪ ಸಂಸದೀಯ ಪಾರ್ಟಿ